
# ಶ್ರೀಚೈತನ್ಯ ಮಹಾಪ್ರಭು – ೬

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಸ್ವಾಮಿ ತಪಸ್ಯಾನಂದ



ಶ್ರೀಚೈತನ್ಯ–ನಿತ್ಯಾನಂದರ ಭಗವನ್ನಾಮ ಸಂಕೀರ್ತನೆ

## ಜಗನ್ನಾಥ ಪುರೀಧಾಮಕ್ಕೆ ಶ್ರೀಚೈತನ್ಯರ ಪಯಣ

ಶ್ರೀಚೈತನ್ಯರಿಗಿದ್ದ ವೃಂದಾವನ ಧಾಮದಲ್ಲಿರುವ ಶ್ರೀಕೃಷ್ಣನ ದರ್ಶನ ಮಾಡುವ ಹಂಬಲವು ಈಗ ಶ್ರೀಕೃಷ್ಣನ ಇನ್ನೊಂದು ರೂಪವೇ ಆಗಿರುವ ನೀಲಾಚಲದಲ್ಲಿರುವ (ಪುರೀಧಾಮ) ಪುರುಷೋತ್ತಮ ಮೂರ್ತಿಯನ್ನು (ಜಗನ್ನಾಥ) ಕಾಣುವ ತವಕವಾಗಿ ಪರಿವರ್ತನೆ ಹೊಂದಿತು. ಆಹಾರ ಮತ್ತು ವಿಶ್ರಾಂತಿಗಳಿಲ್ಲದೆ, ಇಡೀ ಹಾದಿಯನ್ನು ಓಡುತ್ತ ಕ್ರಮಿಸಿದ ನಂತರ ಶ್ರೀಚೈತನ್ಯರು, ಈಗ ಕೊಲ್ಕತಾ ಎಂದು ಕರೆಯುವ ಪ್ರದೇಶಕ್ಕೆ ಬಂದರು. ಆಗ ಅದು ಕಾಡಾಗಿತ್ತು. ಅಲ್ಲಿಂದ ಮುಂದುವರೆದು ಅವರು ಬಂಗಾಳ ಮತ್ತು ಕಳಿಂಗ (ಆಗ ಒರಿಸ್ಸಾ ರಾಜ್ಯಕ್ಕಿದ್ದ ಹೆಸರು) ದೇಶಗಳ ಗಡಿಯನ್ನು ಸೇರಿದರು. ಈ ಎರಡೂ ದೇಶಗಳ ಅರಸರ ನಡುವೆ ದ್ವೇಷವಿದ್ದುದರಿಂದ, ಯಾರನ್ನೂ ಗಡಿ ದಾಟಲು ಬಿಡುತ್ತಿರಲಿಲ್ಲ. ಅಲ್ಲಿ ಇರುತ್ತಿದ್ದ ರಕ್ಷಕ ಭಟರು ಎಲ್ಲರನ್ನೂ ತಡೆಯುತ್ತಿದ್ದರು. ಆದರೆ ಅಲ್ಲಿದ್ದ ಗಡಿರಕ್ಷಣಾ ಪಡೆಯ ಮುಖ್ಯಸ್ಥನು ಈ ಯುವ ಸಂನ್ಯಾಸಿಯ ಮೋಹಕ ವ್ಯಕ್ತಿತ್ವಕ್ಕೆ ಮಾರುಹೋಗಿ, ಮುಂದೆ ಹೋಗಲು ಅವರಿಗೆ ಅನುಮತಿಯನ್ನು ನೀಡಿದ.

ದಾರಿಯಲ್ಲಿ, ಒರಿಸ್ಸಾದ ಬಾಲೇಶ್ವರಕ್ಕೆ ಆರು ಮೈಲುಗಳ ದೂರದಲ್ಲಿ, ವಾಯವ್ಯ ದಿಕ್ಕಿನಲ್ಲಿರುವ ರೇಮುನಾ ಎಂಬ ಊರಿನಲ್ಲಿ ಶ್ರೀಚೈತನ್ಯರು ವಾಸ್ತವ್ಯ ಹೂಡಿದರು. ಅಲ್ಲಿ ಪ್ರಸಿದ್ಧವಾದ ಗೋಪೀನಾಥನ ಮಂದಿರವಿದೆ. ಇಲ್ಲಿ ದೇವರಿಗೆ ನಿವೇದಿಸುವ ಹಾಲಿನ ಪ್ರಸಾದದ ಬಗ್ಗೆ ಚೈತನ್ಯರು ಈಶ್ವರ ಪುರಿಗಳಿಂದ ಕೇಳಿ ತಿಳಿದಿದ್ದರು. ಈಶ್ವರ ಪುರಿಗಳ ಗುರುವಾದ ಮಾಧವ ಪುರಿಗಳು ಎರಡು ಸಾವಿರ ಮೈಲುಗಳ ದೂರ ಪ್ರಯಾಣ ಮಾಡಿ ವೃಂದಾವನದಿಂದ ಈ ಸ್ಥಳಕ್ಕೆ ಬಂದರಂತೆ. ಇಲ್ಲಿ ಅವರಿಗೆ ಅಚ್ಚರಿಯೆನಿಸುವ ಹಲವಾರು ಅನುಭವಗಳಾದವು. ಮಾಧವ ಪುರಿಗಳು ಗೋವರ್ಧನಗಿರಿಧಾರಿಯಾದ ಗೋಪಾಲನ ವಿಗ್ರಹವನ್ನು ವೃಂದಾವನದ ಹತ್ತಿರವಿರುವ ಬೆಟ್ಟವೊಂದರಲ್ಲಿ ಪ್ರತಿಷ್ಠಾಪಿಸಿದ್ದರು ಹಾಗೂ ಆ ವಿಗ್ರಹದ ನಿತ್ಯಪೂಜೆಗಾಗಿ ವ್ಯವಸ್ಥೆಯನ್ನೂ ಕೂಡ ಮಾಡಿದ್ದರು. ಆದರೆ ಆ ಗೋವರ್ಧನಗಿರಿಧಾರಿಯು ಕನಸಿನಲ್ಲಿ ಕಾಣಿಸಿಕೊಂಡು, ಮಾಧವ ಪುರಿಗಳು ನೀಲಾಚಲಕ್ಕೆ ಹೋಗಿ ಅಲ್ಲಿನ ಶ್ರೀಗಂಧವನ್ನು ತಂದು ತನ್ನ ವಿಗ್ರಹಕ್ಕೆ ಪೂಸಬೇಕೆಂದು ಅಣತಿ ಇತ್ತನು. ಅದರಿಂದ ಮಾತ್ರ ತನ್ನ ಶರೀರ ತಂಪಾಗುವುದೆಂದು ಹೇಳಿದನು. ಭಕ್ತರಾದ ಮಾಧವ ಪುರಿಗಳು ಹಲವಾರು ಅಡೆತಡೆಗಳನ್ನು ಎದುರಿಸುತ್ತ ನೀಲಾಚಲದತ್ತ ಪ್ರಯಾಣ ಮಾಡಿ, ಮಾರ್ಗಮಧ್ಯದಲ್ಲಿದ್ದ ಈ ಗೋಪೀನಾಥ ಮಂದಿರದಲ್ಲಿ ತಂಗಿದರು. ಅಲ್ಲಿನ ಅತಿ ಮನೋಹರವಾದ ಗೋಪಾಲನ ವಿಗ್ರಹದ ಮುಂದೆ ಕೀರ್ತನೆಯನ್ನು ಹಾಡುತ್ತ, ಆನಂದಾತಿರೇಕದಿಂದ ನರ್ತನ ಮಾಡಿದರು. ದೇವರಿಗೆ ಸಮರ್ಪಿಸುವ ನೈವೇದ್ಯದ ಬಗ್ಗೆ ವಿಚಾರಿಸಲು, *ಅಮೃತ್ ಕೇಲಿ* (ಅಮೃತದ ಕೆನೆ) ಎಂಬ ಕೆನೆ ಹಾಲಿನಿಂದ ಮಾಡಿದ ಅತಿ ಮಧುರವಾದ ಸಿಹಿ ಪದಾರ್ಥವನ್ನು ಹನ್ನೆರಡು ಗಡಿಗೆಗಳಲ್ಲಿ ಪ್ರತಿನಿತ್ಯವೂ ಶ್ರೀಕೃಷ್ಣನಿಗೆ ನಿವೇದಿಸುವರು ಎಂದು ತಿಳಿದುಬಂದಿತು. ಮಾಧವ ಪುರಿಗಳಿಗೆ ಅದನ್ನು ಸವಿಯಬೇಕೆಂಬ ಇಚ್ಛೆಯಾಯಿತು. ಆದರೆ ಅದನ್ನು ಯಾರ ಬಳಿಯೂ ಕೇಳಲು ಅವರ ಮನಸ್ಸು ಒಪ್ಪಲಿಲ್ಲ. ಆಶ್ಚರ್ಯವೆಂಬಂತೆ, ಭಗವಂತನೇ ಆ ಕ್ಷೇತ್ರದ ಪೂಜಾರಿಯ

ಕನಸಿನಲ್ಲಿ ಬಂದು ಮಾಧವ ಪುರಿಗಳಿಗೆ ಒಂದು ಗಡಿಗೆಯಷ್ಟು ನೈವೇದ್ಯವನ್ನು ಕೊಡಲು ಹೇಳಿದನಂತೆ.

ನಂತರ ಮಾಧವ ಪುರಿಗಳು ನೀಲಾಚಲಕ್ಕೆ ಹೋಗಿ ಅಲ್ಲಿನ ರಾಜಪ್ರತಿನಿಧಿಯ ಮುಖಾಂತರ ಒಂದು ಮಣದಷ್ಟು ಗಂಧದ ಕಟ್ಟಿಗೆಯನ್ನೂ ಇಪ್ಪತ್ತು ತೊಲಗಳಷ್ಟು ಕರ್ಪೂರವನ್ನೂ ಪಡೆದುಕೊಂಡರು. ಅವರು ವೃಂದಾವನಕ್ಕೆ ಹಿಂದಿರುಗುವಾಗ ಮತ್ತೆ ಗೋಪೀನಾಥ ಮಂದಿರಕ್ಕೆ ಬಂದು ಅಲ್ಲಿ ವಾಸ್ತವ್ಯ ಹೂಡಿದರು. ಅಲ್ಲಿ ಅವರಿಗೆ ಮತ್ತೊಂದು ಸ್ವಪ್ನದರ್ಶನವಾಗಿ ತಾವು ವೃಂದಾವನದಲ್ಲಿ ಪ್ರತಿಷ್ಠಾಪಿಸಿದ್ದ ಗೋವರ್ಧನಗಿರಿ ಧಾರಿ ಮೂರ್ತಿಯು ಕಾಣಿಸಿಕೊಂಡು, ವೃಂದಾವನದವರೆಗೆ ಗಂಧದ ಮರವನ್ನು ಹೊತ್ತುಕೊಂಡು ಹೋಗುವ ಆವಶ್ಯಕತೆ ಇಲ್ಲ ಎಂದಿತು. ರೇಮುನಾ ಊರಿನಲ್ಲಿರುವ ಗೋಪಾಲ ಮೂರ್ತಿಗೇ ಅವರು ತಂದಿರುವ ಗಂಧವನ್ನು ಪೂಸಿದರೆ ಸಾಕು, ಏಕೆಂದರೆ ತಾನೂ (ಗೋವರ್ಧನಗಿರಿಧಾರಿ) ಈ ಗೋಪಾಲಮೂರ್ತಿಯೂ ಬೇರೆ ಬೇರೆ ಅಲ್ಲ ಎಂದು ಆದೇಶ ವಾಯಿತು. ಮಾಧವ ಪುರಿಗಳು ಮುಸಲ್ಮಾನ ದೊರೆಗಳು ಆಳುತ್ತಿದ್ದ ಅನೇಕ ರಾಜ್ಯಗಳನ್ನು ದಾಟಿ, ಬಹು ಕಷ್ಟಪಟ್ಟು ವೃಂದಾವನಕ್ಕೆ ಹೋಗಬೇಕಾಗಿತ್ತು. ಅದನ್ನು ಭಗವಂತನೇ ಹೀಗೆ ತಪ್ಪಿಸಿದನು. ಮಾಧವ ಪುರಿಗಳ ನಿಷ್ಠೆಯನ್ನು ಪರೀಕ್ಷಿಸ ಲೆಂದೇ ಭಗವಂತನು ಈ ಎಲ್ಲ ಸಂಕಷ್ಟಗಳಿಗೆ ಅವರನ್ನು ಒಳಪಡಿಸಿದ್ದನು. ಈ ಕತೆಯನ್ನು ಶ್ರೀಕೃಷ್ಣಚೈತನ್ಯರು ತಮ್ಮ ಸುತ್ತಲೂ ನೆರೆದಿದ್ದವರಿಗೆ ವಿವರಿಸಿ ಹೇಳಿದರು. ಅನಂತರ ಜೀವನದ ಅಂತಿಮ ಗಳಿಗೆಯಲ್ಲಿ ರಾಧಾರಾಣಿಯ ಪ್ರೇಮ ದೊಂದಿಗೆ ತಾವು ತಾದಾತ್ಮ್ಯ ಹೊಂದಿದ್ದನ್ನು ತೋರಿಸಲೆಂದೇ ಮಾಧವ ಪುರಿಗಳು ರಚಿಸಿದ್ದ ಶ್ಲೋಕವೊಂದನ್ನು ಉದಾಹರಿಸಿ ದರು: ಅದರ ಅರ್ಥ ಹೀಗಿದೆ: "ಪ್ರಭು! ಪತಿತಪಾವನ, ನೀನೀಗ ಮಥುರೆಯಲ್ಲಿರುವೆ. ನನ್ನ ಬಳಿ ಎಂದು ತಾನೇ ಬರುವೆ? ಓ ಪ್ರಿಯಾ! ನನ್ನ ಹೃದಯವು ನಿನ್ನನ್ನು ಕಾಣ ಬೇಕೆಂಬ ವ್ಯಾಕುಲತೆಯ ವೇದನೆಯಿಂದ ಕೂಡಿದೆ. ನಾನೀಗ ಏನು ತಾನೇ ಮಾಡಲಿ?"

ಈ ಶ್ಲೋಕವನ್ನು ಹೇಳುತ್ತಿದ್ದಂತೆಯೇ ಚೈತನ್ಯ ಮಹಾ ಪ್ರಭುವು ಪ್ರೇಮಾತಿರೇಕದಿಂದ ಉಂಟಾದ ಆನಂದೋನ್ಮಾದ ದಿಂದ ಕೆಳಕ್ಕೆ ಬಿದ್ದರು. ನಿತ್ಯಾನಂದನು ಅವರನ್ನು ಎತ್ತಿ ನಿಲ್ಲಿಸಿದನಾದರೂ, ಭಕ್ತಿಯ ಆವೇಗದಿಂದ ಅತ್ತಿಂದಿತ್ತ ತೂಗುತ್ತ, ನಗುತ್ತ, ನರ್ತಿಸುತ್ತ, ಹಾಡುತ್ತ, ಚೈತನ್ಯರು ಓಡಾಡಲಾರಂಭಿಸಿ ದರು. ಭಾವುಕತೆಯಿಂದ ಅವರ ಧ್ವನಿ ಗದ್ಗದಿತವಾಯಿತು, ಕಣ್ಣುಗಳಿಂದ ಧಾರಾಕಾರವಾಗಿ ಹರಿಯುತ್ತಿದ್ದ ಕಂಬನಿ ಕೆನ್ನೆ ಗಳನ್ನು ತೋಯಿಸಿತು.; ಶರೀರ ನಡುಗಿತು, ಬೆವರು ಹರಿಯ ಲಾರಂಭಿಸಿತು. ಅವರು ಸಂತೋಷದಿಂದ ಅಳಲಾರಂಭಿಸಿ, ಒಮ್ಮೆಗೆ ತಟಸ್ಥರಾಗಿ ನಿಂತುಬಿಟ್ಟರು. ಒಮ್ಮೆ ಪಶ್ಚಾತ್ತಾಪ, ಮತ್ತೊಮ್ಮೆ ದುಃಖ, ಮಗದೊಮ್ಮೆ ನಿದ್ದೆ, ಈಗ ಜಂಭ, ಮರು ಕ್ಷಣವೇ ವಿನಯ, ಇನ್ನೊಮ್ಮೆ ಅತೀ ಹರ್ಷ – ಹೀಗೆ ಅವರ ಭಾವನೆಗಳಲ್ಲಿ ಸರಸರನೆ ಮಾರ್ಪಾಡಾಗುತ್ತಿದ್ದಂತೆ, ಅದಕ್ಕೆ ಸಮನಾಗಿ ಅವರ ದೇಹದ ಬಣ್ಣವೇ ಬದಲಾಗಲು ಆರಂಭಿ ಸಿತು. ಹೀಗೆ ಇಡೀ ರಾತ್ರಿಯನ್ನು ಗೋಪೀನಾಥ ದೇಗುಲದಲ್ಲಿ ಹಾಡುತ್ತ ನರ್ತಿಸುತ್ತ ಅವರು ಕಳೆದರು. ಆ ದೇವಸ್ಥಾನದ ಪುರೋಹಿತರು ಪ್ರಸಿದ್ಧವಾದ *ಅಮೃತ್ ಕೇಲಿ* ಪ್ರಸಾದದ ನಾಲ್ಕು ಗಡಿಗೆಗಳನ್ನು ಅವರಿಗೆ ಮತ್ತು ಅವರ ಅನುಯಾಯಿ ಗಳಿಗೆ ಕೊಡುಗೆಯಾಗಿ ನೀಡಿದರು.

### ಸಾಕ್ಷೀಗೋಪಾಲನ ಆರಾಧನೆ

ನಂತರ ಶ್ರೀಚೈತನ್ಯರು ಜೈಪುರದಲ್ಲಿ ನಿಂತು ಅಲ್ಲಿನ ವರಾಹಮೂರ್ತಿಯ ದೇವಸ್ಥಾನದಲ್ಲಿ ಭಕ್ತಿಯಿಂದ ಹಾಡುತ್ತ, ಕುಣಿಯುತ್ತ ಭಗವಂತನನ್ನು ಆರಾಧಿಸಿದರು. ನಂತರ ಕಟಕ್‌ನಲ್ಲಿರುವ ಸಾಕ್ಷೀಗೋಪಾಲನ ಮಂದಿರಕ್ಕೆ ಬಂದು ಅಲ್ಲಿನ ಭಗವನ್ಮೂರ್ತಿಯ ಅನುಪಮ ಸೌಂದರ್ಯದಿಂದ ಉನ್ಮತ್ತರಾಗಿ ಹೋದರು. ನಿತ್ಯಾನಂದನು ಹಿಂದೊಮ್ಮೆ ಈ ಮಂದಿರಕ್ಕೆ ಬಂದಿದ್ದನು. ಇಲ್ಲಿನ ಮೂರ್ತಿಗೆ 'ಸಾಕ್ಷಿ' ಎಂಬ ಹೆಸರು ಹೇಗೆ ಬಂದಿತೆಂಬ ಕತೆಯನ್ನು ಈಗ ಅವನು ಹೇಳಿದನು. ಒಂದು ಐತಿಹ್ಯದ ಪ್ರಕಾರ, ಒಬ್ಬ ಭಕ್ತನು ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿದ್ದನು. ಅವನನ್ನು ಕಾಪಾಡಲೆಂದೇ ಈ ಮೂರ್ತಿಯು ವೃಂದಾವನದಿಂದ ಇಲ್ಲಿಯವರೆಗೂ ಭಕ್ತನ ಹಿಂದೆಯೇ ನಡೆದುಕೊಂಡು ಬಂದಿತಂತೆ. ಹಿಂತಿರುಗಿ ನೋಡ ಬಾರದು ಎಂಬ ಶರತ್ತಿನೊಂದಿಗೆ ಮೂರ್ತಿಯು ಆ ಭಕ್ತನ ಹಿಂದೆ ಹಿಂದೆ ಬರುತ್ತಿತ್ತು. ಕಟಕ್ ನಗರಕ್ಕೆ ನಲವತ್ತು ಮೈಲು ಗಳಿರುವ ಈ ಗ್ರಾಮವನ್ನು ತಲುಪಿದಾಗ, ಮೂರ್ತಿಯು ಹಿಂದೆ ಬರುತ್ತಿದೆಯೋ ಇಲ್ಲವೋ ಎಂಬ ಸಂದೇಹವನ್ನು ತಾಳಲಾರದೆ, ಭಕ್ತನು ಹಿಂತಿರುಗಿ ನೋಡಿಬಿಟ್ಟನು. ತನ್ನ ಭಕ್ತನ ನಂಬಿಕೆಗೆ ಸಾಕ್ಷಿಯಾಗಿ ಹಿಂದೆ ಹಿಂದೆ ಬಂದ ಆ ಮೂರ್ತಿಯು ಅಲ್ಲಿಯೇ ನಿಂತುಬಿಟ್ಟಿತು. ಈ ವಿಗ್ರಹವನ್ನು ಇಂದಿಗೂ ಅಲ್ಲಿ ನೋಡಬಹುದು.

### ಪುರೀಧಾಮಕ್ಕೆ ಆಗಮನ ಮತ್ತು ಸಾರ್ವಭೌಮರ ದರ್ಶನ

ಅನಂತರ ಮಹಾಪ್ರಭುವು ಭುವನೇಶ್ವರದ ಮೂಲಕ, ಪುರಿಗೆ ಆರು ಮೈಲಿ ದೂರವಿರುವ ಭಾಗ್ರಿ ನದಿಯ ದಡವನ್ನು ಸೇರಿದರು. ಅಲ್ಲಿಂದ ಪುರಿಯ ಜಗನ್ನಾಥ ಮಂದಿರದ ಭವ್ಯ ಗೋಪುರ ಕಾಣುತ್ತಿತ್ತು. ಜಗನ್ನಾಥ ಮಂದಿರದ ಮೇಲಿನಿಂದ ಶ್ರೀಕೃಷ್ಣನೇ ತಮ್ಮನ್ನು ಕರೆಯುತ್ತಿದ್ದಾನೆಂದು ಭಾವಿಸಿದ ಶ್ರೀಚೈತನ್ಯರು, ಭಾವುಕ ಅವಸ್ಥೆಗೆ ಏರಿದರು. ನರ್ತಿಸುತ್ತ, ನರ್ತಿಸುತ್ತ ಶ್ರೀಕೃಷ್ಣನ ವಿರಹವೇದನೆಯಿಂದ ಕೂಗಾಡುತ್ತ

ಆನಂದದಿಂದ ನಗುತ್ತ, ನಿಧಾನವಾಗಿ ಸಾಗುತ್ತಿದ್ದರು. ಹೀಗಾಗಿ ಆರು ಮೈಲಿಗಳ ದೂರವು ನೂರಾರು ಮೈಲುಗಳ ದೂರ ವೆಂಬಂತೆ ದೀರ್ಘವಾಗುತ್ತ ಹೋಯಿತು.

ಕಡೆಗೂ ದೇವಾಲಯದ ಅಂಗಳವನ್ನು ಪ್ರವೇಶಿಸಿದ ಚೈತನ್ಯರು ಮಂದಿರದೊಳಗೆ ಒಬ್ಬಂಟಿಯಾಗಿ ಹೋಗು ವೆನೆಂದು ಹಟ ಹಿಡಿದರು. ಭಗವನ್ಮೂರ್ತಿಯನ್ನು ದೇವ ಮಂದಿರದ ಹಲವಾರು ಸೇವಕರು ಕಾಯುತ್ತಿದ್ದು, ಯಾರನ್ನೂ ಮೂರ್ತಿಯ ಹತ್ತಿರ ಬಿಡುತ್ತಿರಲಿಲ್ಲ. ಇದರ ಬಗ್ಗೆ ತಮ್ಮ ಅನುಯಾಯಿಗಳು ಎಚ್ಚರಿಕೆ ಕೊಟ್ಟಿದ್ದರೂ, ಆವೇಶ ಬಂದವ ರಂತೆ, ಜಗನ್ನಾಥನ ಮೂರ್ತಿಯನ್ನು ಆಲಿಂಗಿಸಲು ಚೈತನ್ಯರು ಮುನ್ನುಗ್ಗಿ ಹೋಗುತ್ತ ದಾರಿಯಲ್ಲಿ ಬಿದ್ದುಬಿಟ್ಟರು. ಕೋಪಗೊಂಡ ದೇವಾಲಯದ ರಕ್ಷಣಾದಳದವರು ಅವರನ್ನು ಥಳಿಸಲು ಇನ್ನೇನು ಮುಂದಾಗಬೇಕು, ಆಗ ಅವರನ್ನು ಒಬ್ಬ ಹಿರಿಯ ಬ್ರಾಹ್ಮಣ ಭಕ್ತರು ತಡೆದು ನಿಲ್ಲಿಸಿ ದರು. ತನ್ನ ಭಕ್ತನನ್ನು ರಕ್ಷಿಸಲು ಭಗವಂತನೇ ಅವರನ್ನು ಕಳಿಸಿದಂತೆ ಇತ್ತು. ಅವರು ಬೇರೆ ಯಾರೂ ಅಲ್ಲ, ವಾಸುದೇವ ಸಾರ್ವಭೌಮರೆಂಬ ಪಂಡಿತರು. ಒರಿಸ್ಸಾದ ಆಗಿನ ರಾಜ ಪ್ರತಾಪರುದ್ರನ ಆಹ್ವಾನದ ಮೇರೆಗೆ ಅನೇಕ ಪಂಡಿತರು ನವದ್ವೀಪವನ್ನು ಬಿಟ್ಟು ಪುರೀಧಾಮದಲ್ಲಿ ನೆಲೆಸಿದ್ದರು. ಅಂತಹವರಲ್ಲಿ ಸಾರ್ವಭೌಮರೂ ಒಬ್ಬರು. ಇಂತಹ ಬಹು ದೊಡ್ಡ ವಿದ್ವಾಂಸರು ಈ ಯುವ ಸಂನ್ಯಾಸಿ ಯತ್ತ ಆಕರ್ಷಿತರಾದುದು ಆಶ್ಚರ್ಯವೇ ಆಗಿತ್ತು. ಶ್ರೀಚೈತನ್ಯ ರನ್ನು ತಮ್ಮ ಮನೆಗೆ ಎತ್ತಿಕೊಂಡು ಹೋಗುವಂತೆ ಅಲ್ಲಿದ್ದ ತಮ್ಮ ವಿದ್ಯಾರ್ಥಿಗಳಿಗೆ ಅವರು ಹೇಳಿದರು. ಶ್ರೀಚೈತನ್ಯರ ದೇಹದ ಸ್ಪರ್ಶಮಾತ್ರದಿಂದ ಆ ವಿದ್ಯಾರ್ಥಿಗಳಿಗೂ ಭಕ್ತಿಭಾವ ಉಕ್ಕೇರಿತು. ಹರಿ ಬೋಲ್, ಹರಿ ಬೋಲ್ ಎಂದು ಕೂಗುತ್ತ ಅವರೆಲ್ಲರೂ ಉನ್ಮಾದದಿಂದ ನರ್ತಿಸಲಾರಂಭಿಸಿದರು. ಇದರಿಂದ ಸಾರ್ವಭೌಮರು ಬಹಳ ಪ್ರಭಾವಿತರಾದರು. ಅವರು ಸಂಪ್ರದಾಯದಿಂದ ಬಂದ ಎಲ್ಲ ಕಟ್ಟುಪಾಡುಗಳನ್ನು ಆಚರಿಸುವವರು, ಮೇಲಾಗಿ ವಿದ್ವಾಂಸರು. ಹೃದಯಪೂರ್ವಕ ವಾದ ಭಕ್ತರೇನಲ್ಲ. ಆದರೆ ಆ ಕ್ಷಣದಲ್ಲಿ, ತಾತ್ಕಾಲಿಕವಾಗಿ, ಭಕ್ತಿಭಾವಪರವಶರಾಗಿ ಅವರು ಚೈತನ್ಯರ ಪಾದಾರವಿಂದ ಗಳಿಗೆ ನಮಸ್ಕರಿಸಿ ಕೈಮುಗಿದರು.

ಆದರೆ ಅಲ್ಪಕಾಲದಲ್ಲಿಯೇ ವಾಸುದೇವ ಸಾರ್ವಭೌಮರ ವಿದ್ವತ್ತಿನ ಅಹಂಭಾವ ಅವರಲ್ಲಿ ಮತ್ತೆ ಮೇಲೆದ್ದಿತು, ತಮ್ಮ ಈ ನಿರ್ಣಯವನ್ನು ತಾವೇ ಪ್ರಶ್ನಿಸುವಂತೆ ಮಾಡಿತು. ಈ ಯುವ ಸಂನ್ಯಾಸಿಯ ಬಗ್ಗೆ ತಾನು ಅವಸರದ ತೀರ್ಮಾನ ಮಾಡಿದೆ ಎಂದು ಅವರು ಅಂದುಕೊಂಡರು. ಆದರೂ, ಚೈತನ್ಯರು ಮತ್ತು ಅವರ ಭಕ್ತರಿಗೆ ಎಲ್ಲ ಬಗೆಯ ಸವಲತ್ತು ಗಳನ್ನೂ ವಾಸಕ್ಕೆ ಸ್ಥಳವನ್ನೂ ಅವರು ಒದಗಿಸಿಕೊಟ್ಟರು. ಈಗ ಅವರು ಚೈತನ್ಯರನ್ನು ತಮ್ಮ ಸ್ವಂತ ಮಗನಂತೆ ಕಾಣಲಾರಂಭಿಸಿ, ಚೈತನ್ಯರು ಸಂನ್ಯಾಸಿಯಾಗುವುದಕ್ಕೆ ಬಹಳ ಸಣ್ಣವರು, ಅವರ ಭಕ್ತಿಭಾವ, ಸಂಕೀರ್ತನೆ, ನರ್ತನ ಇವೆಲ್ಲವೂ ಬರಿಯ ಬಾಹ್ಯ ಅತಿರೇಕಗಳು ಮತ್ತು ವಿಪರ್ಯಾಸಗಳಷ್ಟೆ ಎಂದು ಭಾವಿಸಿ, ಚೈತನ್ಯರು ತಮ್ಮ ಬಳಿ ವೇದಾಂತವನ್ನು ಕಲಿತು ಬಾಳಿನಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಬೇಕು ಎಂದು ಅವರಿಗೆ ತಿಳಿಹೇಳಿದರು. ಚೈತನ್ಯಮಹಾಪ್ರಭುಗಳೂ ತುಂಬು ವಿನಯ ದಿಂದ ಈ ಸಲಹೆಗಳನ್ನು ಒಪ್ಪಿಕೊಂಡರು. ಆ ಪ್ರಕಾರವಾಗಿ, ವಾಸುದೇವ ಸಾರ್ವಭೌಮರು ಉಪನಿಷತ್ತಿನ ಕೆಲವು ಭಾಗಗಳನ್ನು ಓದಿ ಹೇಳಿ, ಅದನ್ನು ಶಂಕರಾಚಾರ್ಯರ ಭಾಷ್ಯಕ್ಕೆ ಅನುಗುಣ ವಾಗಿ, ಪಾಂಡಿತ್ಯಪೂರ್ವಕವಾಗಿ ವಿವರಿಸಿದರು. ಕೆಲ ಕಾಲದ ನಂತರ, ತಮ್ಮ ವಿವರಣೆ ಅರ್ಥವಾಗುತ್ತಿದೆಯೆ ಎಂದು ಚೈತನ್ಯ ರನ್ನು ಕೇಳಿದಾಗ, ಅವರಿಂದ ಬಂದ ಉತ್ತರ ಪಂಡಿತರಿಗೆ ಆಘಾತಕಾರಿಯಾಗಿತ್ತು. ಚೈತನ್ಯರು "ನೀವು ಬೋಧಿಸಿದ ಉಪನಿಷತ್ತಿನ ವಾಕ್ಯಗಳು ನನಗೆ ಚೆನ್ನಾಗಿ ಅರ್ಥವಾಗುವಷ್ಟು ಸರಳವಾಗಿಯೇ ಇವೆ. ಆದರೆ ನೀವು ಉದಾಹರಿಸಿದ ಭಾಷ್ಯ ವಿವರಣೆಯ ಒಂದು ಪದವೂ ನನಗೆ ಅರ್ಥವಾಗಲಿಲ್ಲ" ಎಂದು ಬಿಟ್ಟರು. ಇದಕ್ಕೆ ಕಾರಣ, ಶಂಕರಾಚಾರ್ಯರ ಅದ್ವೈತ ಭಾಷ್ಯ ವಿವರಣೆ ಅವರಿಗೆ ಒಂದು ಅಸಂಬದ್ಧ ಆಲಾಪದಂತೆ ಕಂಡಿತು.

ವಾಗ್ವಿವಾದದಲ್ಲಿ ತನಗೆ ಸಮನಾದವರು ಯಾರೂ ಇಲ್ಲ ವೆಂದುಕೊಂಡಿದ್ದ ವಾಸುದೇವ ಸಾರ್ವಭೌಮರಿಗೆ ತಮ್ಮ ಪಾಂಡಿತ್ಯಕ್ಕೆ ಬಂದೊದಗಿದ ಈ ನೇರ ಸವಾಲಿನಿಂದ ಭಾರೀ ಆಘಾತವೇ ಆಯಿತು. ಅನಂತರ ಅವರು ಭಾಗವತ ಮಹಾ ಪುರಾಣದಿಂದ ಒಂದು ಶ್ಲೋಕವನ್ನು ಉದಾಹರಿಸಿ, ಅದಕ್ಕೆ ಒಂಭತ್ತು ಬಗೆಯ ವಿವರಣೆಗಳನ್ನು ಕೊಟ್ಟರು. ಚೈತನ್ಯರು ಪಂಡಿತರ ವಿವರಣೆಗಳಲ್ಲಿದ್ದ ದೋಷಗಳನ್ನು ಎತ್ತಿ ತೋರಿಸಿದ್ದು ಮಾತ್ರವಲ್ಲ, ಅದೇ ಶ್ಲೋಕಕ್ಕೆ ಮತ್ತೂ ಹಲವು ವಿವರಣೆಗಳನ್ನು ಕೊಟ್ಟರು. ಸಾರ್ವಭೌಮರಿಗೆ ತಮ್ಮ ಪಾಂಡಿತ್ಯದ ಬಗ್ಗೆ ಅಹಂಕಾರ ಇದ್ದಿತಾದರೂ ಟೀಕೆಟಿಪ್ಪಣಿಗಳನ್ನು ಪೂರ್ವಾಗ್ರಹ ವಿಲ್ಲದೆ ಸ್ವೀಕರಿಸುವ ಮುಕ್ತ ಮನಸ್ಸು ಕೂಡ ಇದ್ದಿತು. ಆ ಯುವ ಸಂನ್ಯಾಸಿಯ ಮುಖದಿಂದ ಹೊರಬರುತ್ತಿದ್ದ ಮಾತು ಗಳಲ್ಲಿದ್ದ ನಿಖರತೆ ಮತ್ತು ನಿರ್ದುಷ್ಟತೆಗಳನ್ನು ಕಂಡು, ಈತನಿಗೆ ಯಾವ ಬೋಧನೆಯ ಆವಶ್ಯಕತೆಯೂ ಇಲ್ಲವೆಂದು ಅವರು ಮನಗಂಡರು. ಅದಲ್ಲದೆ ಶ್ರೀಚೈತನ್ಯರನ್ನು ವೇದಮಯರೆಂದೂ, ಇವರಿಗೆ ವೇದಗಳು ಬರಿಯ ಆಟಿಗೆಯ ವಸ್ತುಗಳೆಂದೂ ಘೋಷಿಸಿದರು. ಅದಕ್ಕೆ ಉತ್ತರವಾಗಿ ಶ್ರೀಚೈತನ್ಯ ಮಹಾಪ್ರಭು ಗಳು ಹೃದಯವಿಹೀನವಾದ ತರ್ಕವನ್ನಾಗಲೀ ಶುಷ್ಕ ಪಾಂಡಿತ್ಯ ವನ್ನಾಗಲೀ ವೇದಗಳು ಉಪದೇಶಿಸುವುದಿಲ್ಲ, ಅವು ಬೋಧಿಸು

ವುದು ಕೇವಲ ಭಕ್ತಿ ಮತ್ತು ಪ್ರೇಮಗಳನ್ನು ಮಾತ್ರ ಎಂದು ನುಡಿದರು.

ವಿದ್ವತ್ ಕ್ಷೇತ್ರದಲ್ಲಿ ಅಜೇಯರೆಂದುಕೊಂಡಿದ್ದ ತಮಗೆ ಹೀಗೆ ಸೋಲುಂಟಾದುದನ್ನು ಕಂಡು, ಸಾರ್ವಭೌಮರು ಶ್ರೀಚೈತನ್ಯರ ಪಾದಗಳಿಗೆ ಬಿದ್ದು ಶರಣಾದರು. ಮೇಲೆದ್ದು ನೋಡಿದಾಗ, ಅವರಿಗೆ ಕಂಡದ್ದು ಯುವ ಸಂನ್ಯಾಸಿಯ ರೂಪವಲ್ಲ, ಆರು ಭುಜದ ದಿವ್ಯಮೂರ್ತಿಯ ದರ್ಶನ. ಆ ಮೂರ್ತಿಯು ತನ್ನೆರಡು ಹಸ್ತಗಳಲ್ಲಿ ಬಿಲ್ಲು–ಧನುಸ್ಸುಗಳನ್ನು ಹಿಡಿದಿದ್ದರೆ, ಮತ್ತೆರಡರಲ್ಲಿ ಕೊಳಲನ್ನು ನುಡಿಸುತ್ತಿತ್ತು ಹಾಗೂ ಉಳಿದ ಇನ್ನೆರಡು ಕೈಗಳಲ್ಲಿ ತಾಪಸಿಯ ದಂಡವನ್ನೂ ಭಿಕ್ಷಾಪಾತ್ರೆಯನ್ನೂ ಹಿಡಿದಿತ್ತು. ಈ ಮಹಾನ್ ದರ್ಶನವು ಸಾರ್ವಭೌಮರನ್ನು ಗಾಢ ಸಮಾಧಿಸ್ಥರಾಗುವಂತೆ ಮಾಡಿತು. ಸಮಾಧಿಯಿಂದ ಹೊರಬಂದ ಮೇಲೆ ಅವರು ಕಂಡದ್ದು ಆ ದಿವ್ಯ ಷಡ್‌ಭುಜದ ಆಕೃತಿಯನ್ನಲ್ಲ, ಯುವ ತಾಪಸಿಯಾದ ಶ್ರೀಚೈತನ್ಯರ ಮೋಹಕ ರೂಪವನ್ನು. ಹಿಂದೆ ಯಾರು ರಾಮನಾಗಿ, ಕೃಷ್ಣನಾಗಿ ಅವತರಿಸಿದನೋ ಅವನೇ ಈಗ ಶ್ರೀಚೈತನ್ಯ ಮಹಾಪ್ರಭುವಾಗಿ ಧರೆಗಿಳಿದು ಬಂದಿರುವನು ಎಂಬುದನ್ನು ಸಾರ್ವಭೌಮರು ಈಗ ಅರಿತುಕೊಂಡರು. ಆದರೂ ತಮ್ಮ ಈ ಅನುಭವ ಬರಿಯ ಭ್ರಮೆಯಿರಬಹುದೇ ಎಂಬ ಸಂದೇಹ ಇನ್ನೂ ಅವರ ಮನಸ್ಸಿನಲ್ಲಿ ಇದ್ದೇ ಇತ್ತು.

ಮರುದಿನ ಮುಂಜಾವಿನಲ್ಲಿ, ಚೈತನ್ಯ ಮಹಾಪ್ರಭುಗಳು ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಪ್ರಸಾದವನ್ನು ತಲೆಯ ಮೇಲಿಟ್ಟುಕೊಂಡು ವಾಸುದೇವ ಸಾರ್ವಭೌಮರ ಕೊಠಡಿಗೆ ಬಂದು ಬಾಗಿಲು ತಟ್ಟಿದರು. ಅವರಿನ್ನೂ ಎದ್ದಿರಲೇ ಇಲ್ಲ. ಪಂಡಿತನೊಡನೆ ಕುಳಿತು, ಪ್ರಸಾದವನ್ನು ತಿನ್ನುವಂತೆ ಕೇಳಿಕೊಂಡರು. ಬೆಳಗ್ಗೆ ಸ್ನಾನಸಂಧ್ಯಾವಂದನೆಗಳ ನಂತರವೇ ಆಹಾರವನ್ನು ಸೇವಿಸುವುದು ಮಡಿವಂತ ಬ್ರಾಹ್ಮಣರ ನಿಯಮವಾಗಿತ್ತು. ಇದಕ್ಕೆ ವಿರುದ್ಧವಾಗಿ ಈಗಲೇ ಪ್ರಸಾದವನ್ನು ಸ್ವೀಕರಿಸಲು ಚೈತನ್ಯರು ಸಾರ್ವಭೌಮರಿಗೆ ಹೇಳುತ್ತಿದ್ದಾರೆ. ಆದರೆ ಚೈತನ್ಯ ಮಹಾಪ್ರಭುಗಳ ಮಾತನ್ನು ಮೀರಲಾಗದೆ, ಭಗವಂತನಿಗಾಗಿ, ತಾವು ಕಟ್ಟುನಿಟ್ಟಾಗಿ ನಡೆಸಿಕೊಂಡು ಬಂದಿದ್ದ ಆಚಾರವನ್ನೂ ಉಲ್ಲಂಘಿಸಲು ಸಾರ್ವಭೌಮರು ತಯಾರಾದರು. ಪ್ರೇಮಾಭಕ್ತಿಯ ರೀತಿಯೇ ಹೀಗೆ – ರಾಧೆ ತನ್ನ ಸಖಿಯರನ್ನು ಕುರಿತು ಹಾಡುತ್ತಾಳೆ: 'ಕೇಳಿರಿ, ನನ್ನ ಪ್ರಿಯತಮನ ಕೊಳಲು ನನ್ನನ್ನು ಬಾ ಎಂದು ಕರೆಯುತ್ತಲಿದೆ. ನಾನೀಗ ಹೋಗಲೇಬೇಕು. ಬೇರೆಯವರು ಏನು ಹೇಳುತ್ತಾರೋ ಎಂಬ ಭಯ ನಿಮಗಿದ್ದರೆ, ನನ್ನ ಜತೆ ಬರಲೇಬೇಡಿ. ತ್ಯಾಗವಿಲ್ಲದೆ ನನ್ನ ಪ್ರಿಯತಮನು ಒಲಿಯಲಾರನು. ಅವನನ್ನು ನೀವು ಪಡೆದುಕೊಳ್ಳಲು ಬಯಸಿದರೆ, ಅವನಲ್ಲಿ ನಿಮ್ಮದೆಲ್ಲವನ್ನೂ ಸಮರ್ಪಣೆ ಮಾಡದೆ ಬೇರೆ ಮಾರ್ಗವೇ ಇಲ್ಲ.'

ಸಾರ್ವಭೌಮರು ಈಗ ಸಂಪೂರ್ಣವಾಗಿ ಶರಣಾಗತ ರಾದರು; ತಮ್ಮನ್ನು ಬಂಧಿಸಿದ್ದ ರೀತಿರಿವಾಜು, ಆಚಾರ ವಿಚಾರಗಳನ್ನೆಲ್ಲ ಕಿತ್ತು ಬಿಸುಟರು. ಶ್ರೀಚೈತನ್ಯರು ಅವರನ್ನು ಪ್ರೇಮದಿಂದ ಅಪ್ಪಿಕೊಂಡೊಡನೆಯೇ ದಿವ್ಯೋನ್ಮಾದಭರಿತರಾಗಿ ಪ್ರಜ್ಞಾಶೂನ್ಯರಾದರು. ಶರೀರದ ಅರಿವು ಮರಳಿ ಬಂದೊಡನೆಯೇ ಭಗವದಾನಂದದಲ್ಲಿ ಮುಳುಗಿ ಶ್ರೀಹರಿಯ ಪವಿತ್ರ ನಾಮವನ್ನು ಉಚ್ಚರಿಸಲು ಆರಂಭಿಸಿದರು. ಪಾಂಡಿತ್ಯದ ಅಪಂಭಾವ ಅವರಲ್ಲಿ ಈಗ ಸಂಪೂರ್ಣವಾಗಿ ಕಾಣೆಯಾಯಿತು. ಭಗವದವತಾರವೇ ಆದ ಮಹಾಪ್ರಭುವಿನ ಪಾದಗಳಿಗೆ ಎರಗುತ್ತ, ಆಗಿಂದಾಗಲೇ ಆಶುಕವಿತ್ವದಿಂದ ಭಗವಂತನ ಸ್ತುತಿಯ ರೂಪದಲ್ಲಿ ನೂರು ಶ್ಲೋಕಗಳನ್ನು ರಚಿಸಿ, ಅದನ್ನು ಶ್ರೀಚೈತನ್ಯರಿಗೆ ಸಮರ್ಪಿಸಿದರು. ಮಾನವನಂತೆ ಕಂಡರೂ ಶ್ರೀಚೈತನ್ಯರು ಭಗವತ್ಸ್ವರೂಪಿಯೇ ಎಂದು ಮನಗಂಡರು. ಕತೆಗಳಲ್ಲಿ ಬರುವ ಸ್ಪರ್ಶಮಣಿಯು ಸಾಧಾರಣ ಕಲ್ಲಿನಂತೆ ಕಂಡರೇನು, ಅದು ಕಬ್ಬಿಣದ ತುಂಡೊಂದನ್ನು ಸ್ಪರ್ಶಿಸಿದಾಗ, ಅದು ಬಂಗಾರವಾಗಿಬಿಡುತ್ತದೆ. ಸ್ಪರ್ಶಮಣಿಯ ನೈಜಸ್ವರೂಪ ಆಗ ಬೆಳಕಿಗೆ ಬರುತ್ತದೆ. ಕಟ್ಟಾ ವೈಚಾರಿಕ ಬುದ್ಧಿಯ ವಾಸುದೇವ ಸಾರ್ವಭೌಮರು, ಮೊದಲು ಕಬ್ಬಿಣದ ತುಂಡಿಗಿಂತಲೂ ಕಠಿಣವಾಗಿದ್ದರು, ಪೆಡಸಾಗಿದ್ದರು. ಆದರೆ ಈಗ ಚೈತನ್ಯದೇವರ ಸ್ಪರ್ಶಮಾತ್ರದಿಂದಲೇ ಭಕ್ತಿಯ ಮಾರ್ದವತೆಯಲ್ಲಿ ತೊಯ್ದುಹೋದರು. ವಾಸುದೇವರಿಗೆ ಕಾಣಿಸಿಕೊಂಡ ಆರು ಭುಜಗಳ ಪರಮಸುಂದರ ವಿಗ್ರಹವನ್ನು ಇಂದಿಗೂ ನಾವು ಪುರೀಧಾಮದ ದೇಗುಲದಲ್ಲಿ ಪ್ರತಿಷ್ಠಾಪಿಸಿರುವುದನ್ನು ಕಾಣಬಹುದು. ಸಾರ್ವಭೌಮರ ಈ ಪರಿವರ್ತನೆಯು ಪುರೀ ಪಟ್ಟಣದ ಸಕಲ ವಿದ್ವತ್ ಸಮಾಜವು ಚೈತನ್ಯರ ಭಕ್ತಿಪಂಥಕ್ಕೆ ಪರಿವರ್ತನೆಗೊಂಡುದರ ದ್ಯೋತಕವಾಗಿದೆ. ಕ್ರಮೇಣ ಕಳಿಂಗ ದೇಶದ ಮಹಾರಾಜನೂ ವಾಸುದೇವ ಸಾರ್ವಭೌಮರ ಒಡೆಯನೂ ಆದ ಪ್ರತಾಪರುದ್ರನೂ ಕೂಡ ಚೈತನ್ಯರ ಮಹಾತ್ಮೆಯನ್ನು ಗುರುತಿಸಿದನು. ಹೀಗೆ ಶ್ರೀಕೃಷ್ಣಚೈತನ್ಯರ ಪ್ರೇಮಭಕ್ತಿಯ ಸಂದೇಶದ ಪ್ರವಾಹ ಇಡೀ ಒರಿಸ್ಸಾ ಪ್ರಾಂತದಲ್ಲಿ ತುಂಬಿ ಹರಿಯಲಾರಂಭಿಸಿತು. ಆ ರಾಜ್ಯದ ಎಲ್ಲ ದಿಕ್ಕುಗಳೂ ಹರಿನಾಮ ಸಂಕೀರ್ತನೆಯ ಅಮೃತೋಪಮ ಧ್ವನಿಯನ್ನು ಪ್ರತಿಧ್ವನಿಸಲಾರಂಭಿಸಿದವು.

(ಮುಂದುವರಿಯುವುದು)

**ಶ್ರೀ ಚೈತನ್ಯರ ಸಂಕೀರ್ತನ ಮಂತ್ರ**

ಹರೇ ರಾಮ, ಹರೇ ರಾಮ
ರಾಮ ರಾಮ, ಹರೇ ಹರೇ ।
ಹರೇ ಕೃಷ್ಣ, ಹರೇ ಕೃಷ್ಣ
ಕೃಷ್ಣ ಕೃಷ್ಣ, ಹರೇ ಹರೇ ॥